**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ: E-**29933/**DSERT/EVG/1-10ಮೌಲ್ಯಾಂಕನ/2025-26 ದಿನಾಂಕ: 17-07-2025

# ಸುತ್ತೋಲೆ

ವಿಷಯ: 2025-26 ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯ ಪಠ್ಯಕ್ರಮದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಮೌಲ್ಯಾಂಕನ ನಡೆಸುವ ಬಗ್ಗೆ.

ಉಲ್ಲೇಖ: 1. ಆಯುಕ್ತರ ಕಛೇರಿ ಜ್ಞಾಪನ ಸಂಖ್ಯೆ: ಸಿ4(9)ವಾ.ಕ್ರಿ.ಯೋ/ಅನುಷ್ಠಾನ/01/ 2024-25 ದಿನಾಂಕ: 02-04-2025

2. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸ.ಶಿ.ಕ ರವರ ಸುತ್ತೋಲೆ ಸಂಖ್ಯೆ: SSK/NKC/FPA/1/2024-JDQA ದಿನಾಂಕ: 28-04-2025

3. ಏಪ್ರಿಲ್ - ಜೂನ್ 2025 ರ ಮಾಹೆಯ ಶಿಕ್ಷಣ ವಾರ್ತೆಯಲ್ಲಿನ ಶೈಕ್ಷಣಿಕ ಮಾರ್ಗಸೂಚಿ 2025-26

***

2025-26ನೇ ಶೈಕ್ಷಣಿಕ ಸಾಲಿನಲ್ಲಿ ಕರ್ನಾಟಕ ರಾಜ್ಯ ಪಠ್ಯಕ್ರಮವನ್ನು ಅನುಸರಿಸುತ್ತಿರುವ 1 ರಿಂದ 10ನೇ ತರಗತಿ ಶಾಲೆಗಳಿಗೆ 2025-26ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ವಾರ್ಷಿಕ ಕ್ರಿಯಾಯೋಜನೆ ಹಾಗೂ ಉಲ್ಲೇಖಗಳನ್ವಯ ಸದರಿ ಸುತ್ತೋಲೆಯನ್ನು ಹೊರಡಿಸಲಾಗಿದೆ. ಇದನ್ನು ಆಧರಿಸಿ ಶಾಲೆಗಳಲ್ಲಿ ಪಠ್ಯ ಬೋಧನೆ ಹಾಗೂ ಮೌಲ್ಯಾಂಕನ ಕುರಿತು ಈ ಕೆಳಕಂಡಂತೆ ಕ್ರಮವಹಿಸಲು ತಿಳಿಸಿದೆ.

1. ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ದಿನಾಂಕ:29-05-2025 ರಿಂದ ಶೈಕ್ಷಣಿಕ ವರ್ಷವು ಪ್ರಾರಂಭವಾಗಿದೆ. '**ಕಲಿಕಾ ಚೇತರಿಕೆ**' ಉಪಕ್ರಮ ಮತ್ತು '**ಕಲಿಕಾ ಬಲವರ್ಧನೆ**' ಕಾರ್ಯಕ್ರಮದಡಿ ಕಲಿವಿನ ಫಲಾಧಾರಿತ ವಿದ್ಯಾರ್ಥಿಗಳ ಚಟುವಟಿಕೆ ಪುಸ್ತಕ ಹಾಗೂ ಶಿಕ್ಷಕರ ಚಟುವಟಿಕೆ ಕೋಶಗಳನ್ನು ಸಿದ್ಧಪಡಿಸಿ ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಅಳವಡಿಸಿ ಕಲಿಕಾ ಅಂತರವನ್ನು ಬೆಸೆಯಲು ನಿರಂತರವಾಗಿ ಉಪಕ್ರಮಗಳನ್ನು ಅನುಷ್ಠಾನಿಸಲಾಗುತ್ತಿದೆ. ಅಲ್ಲದೇ ಮೌಲ್ಯಾಂಕನಕ್ಕೆ ಪೂರಕವಾಗಿ ಕಲಿಕಾ ಫಲ ಆಧಾರಿತ ಪ್ರಶ್ನೆಕೋಠಿಯನ್ನು ಸಿದ್ಧಪಡಿಸಿ ಅನುಷ್ಠಾನ ಸಂಬಂಧ ಮಾರ್ಗದರ್ಶನ ನೀಡಲಾಗಿದೆ.
2. ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ಸಜ್ಜುಗೊಳಿಸಲು ಶೈಕ್ಷಣಿಕ ವರ್ಷದ ಆರಂಭದಲ್ಲಿ '**ಸೇತುಬಂಧ**' ಕಾರ್ಯಕ್ರಮವನ್ನು ಜೂನ್ ತಿಂಗಳಿನಲ್ಲಿ ನಡೆಸುವುದು. 1 ರಿಂದ 10ನೇ ತರಗತಿಗಳಿಗೆ ಸೇತುಬಂಧ ಸಾಹಿತ್ಯವನ್ನು ಸಿದ್ಧಪಡಿಸಿ DSERT website ನಲ್ಲಿ ಅಳವಡಿಸಲಾಗಿದೆ. ಕಾರ್ಯಕ್ರಮ ಅನುಷ್ಠಾನಿಸುವ ಕುರಿತು ಸೇತುಬಂಧ ಸುತ್ತೋಲೆಯ ಮೂಲಕ ಮಾರ್ಗದರ್ಶನ ನೀಡಲಾಗಿದೆ.
3. ಉಲ್ಲೇಖ 1 ಮತ್ತು 3 ರನ್ನು ಆಧರಿಸಿ, ವಾರ್ಷಿಕ ಪಾಠ ಹಂಚಿಕೆ ಮಾಡಿಕೊಂಡು, ಕಲಿಕೆಯನ್ನು ಅನುಕೂಲಿಸುವುದು.

4. 2025-26ನೇ ಸಾಲಿನಿಂದ ರಾಜ್ಯ ಪಠ್ಯಕ್ರಮದ ಶಾಲೆಗಳಲ್ಲಿ ತರಗತಿ ಪ್ರಕ್ರಿಯೆಯಲ್ಲಿ ನಿರಂತರವಾಗಿ ಅಳವಡಿಸಲು ಅನುಕೂಲವಾಗುವಂತೆ ಹಾಗೂ ಪಾಠ ಆಧಾರಿತ ಮೌಲ್ಯಾಂಕನ ಸಾಮಗ್ರಿಯನ್ನು ಸಿದ್ಧಪಡಿಸಿ DSERT Website ನಲ್ಲಿ ಅಳವಡಿಸಿದೆ.
5. ಪಾಠ ಆಧಾರಿತ ಮೌಲ್ಯಾಂಕನಕ್ಕೆ (LBA) ಸಂಬಂಧಿಸಿದಂತೆ, ಪ್ರತಿ ಪಾಠದ ನಂತರ ಮಗುವಿನ ಕಲಿಕೆಯನ್ನು ದೃಢೀಕರಿಸಿಕೊಳ್ಳಲು ಪಾಠ ಆಧಾರಿತ ಮೌಲ್ಯಾಂಕನವನ್ನು (Unit Test) ಮಾಡುವುದು.
6. ಕನ್ನಡ ಮಾಧ್ಯಮದ ಶಾಲೆಗಳಲ್ಲಿ ಪ್ರತಿ ಘಟಕದ ನಂತರ LBA ಪ್ರಶ್ನೆಕೋಠಿಯಿಂದ 20 ಅಂಕಗಳಿಗೆ ಹಾಗೂ ಮರುಸಿಂಚನದಿಂದ (6 ರಿಂದ 10ನೇ ತರಗತಿ) 05 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಒಟ್ಟು 25 ಅಂಕಗಳಿಗೆ ಮೌಲ್ಯಾಂಕನ ಮಾಡುವುದು.
7. ಉಳಿದ ತರಗತಿಗಳು ಮತ್ತು ಮಾಧ್ಯಮಗಳಿಗೆ 25 ಅಂಕಗಳಿಗೆ LBA ಪ್ರಶ್ನೆಕೋಠಿಯಲ್ಲಿರುವ ಪ್ರಶ್ನೆಗಳನ್ನಾಧರಿಸಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡಲು ಕ್ರಮವಹಿಸುವುದು.
8. ಪಾಠ ಆಧಾರಿತ ಮೌಲ್ಯಾಂಕನ, ರೂಪಣಾತ್ಮಕ (FA) ಹಾಗೂ ಸಂಕಲನಾತ್ಮಕ (SA) ಮೌಲ್ಯಾಂಕನ ಕೈಗೊಂಡು, ಮಕ್ಕಳ ಕಲಿಕೆಯ ಪ್ರಗತಿಯನ್ನು SATS ನಲ್ಲಿ ಕಡ್ಡಾಯವಾಗಿ ದಾಖಲಿಸುವುದು
9. SATS ನ ಪ್ರತಿ ಮೌಲ್ಯಾಂಕನದ ವಿಶ್ಲೇಷಣಾ ವರದಿಯನ್ನು ಆಧರಿಸಿ ಮಗುವಿನ ಶೈಕ್ಷಣಿಕ ಅಭಿವೃದ್ಧಿಗೆ ಕ್ರಮವಹಿಸುವುದು.
10. 2025-26ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸೇತುಬಂಧ ಕಾರ್ಯಕ್ರಮ, ಪಾಠ ಆಧಾರಿತ ಮೌಲ್ಯಾಂಕನ, ರೂಪಣಾತ್ಮಕ ಹಾಗೂ ಸಂಕಲನಾತ್ಮಕ ಮೌಲ್ಯಾಂಕನ ನಿರ್ವಹಿಸಲು ಅನುವಾಗುವಂತೆ ಸದರಿ ಸುತ್ತೋಲೆಯಲ್ಲಿ ಮಾಹಿತಿಯನ್ನು ನೀಡಲಾಗಿದೆ. ಅದರಂತೆ, ಮೇಲುಸ್ತುವಾರಿ ಅಧಿಕಾರಿಗಳು ಭೇಟಿ ಸಮಯದಲ್ಲಿ ನಿರಂತರವಾಗಿ ಶಾಲಾ ಹಂತದಲ್ಲಿ ಕ್ರಮವಹಿಸುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಂಡು ಅನುಪಾಲನೆ ಮಾಡುವುದು.

**ಸೇತುಬಂಧ ಶಿಕ್ಷಣ:**

- ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ವಿದ್ಯಾರ್ಥಿಗಳು ಶಾಲಾ ವಾತಾವರಣಕ್ಕೆ ಹೊಂದಿಕೊಳ್ಳುವಂತೆ **'ಮಳೆಬಿಲ್ಲು'** ಸಾಹಿತ್ಯದಲ್ಲಿನ ಚಟುವಟಿಕೆಗಳನ್ನು ನಿರ್ವಹಿಸುವುದು. ಸದರಿ ಸಾಹಿತ್ಯವು DSERT website ನಲ್ಲಿ ಲಭ್ಯವಿದೆ.
- ಆಯಾ ತರಗತಿಯ ಕಲಿಕಾ ಫಲಗಳ ಸಾಧನೆಗೆ ವಿದ್ಯಾರ್ಥಿಗಳು ಸಾಧಿಸಿರಲೇಬೇಕಾದ ಹಿಂದಿನ ತರಗತಿಯ ಕಲಿಕಾ ಫಲಗಳನ್ನು ಆಧರಿಸಿ ಸೇತುಬಂಧ ಚಟುವಟಿಕೆಗಳನ್ನು ನಿರ್ವಹಿಸುವುದು.
- 1ನೇ ತರಗತಿಗೆ 40 ದಿವಸಗಳ ವಿದ್ಯಾಪ್ರವೇಶ, 2 ರಿಂದ 10ನೇ ತರಗತಿಗಳಿಗೆ ಜೂನ್ ಮಾಹೆಯ ಪ್ರಾರಂಭದಲ್ಲಿ ಪೂರ್ವ / ನೈದಾನಿಕ ಪರೀಕ್ಷೆಯೊಂದಿಗೆ (Diagnostic Test) 15 ದಿವಸಗಳ ಸೇತುಬಂಧ ಕಾರ್ಯಕ್ರಮ ನಡೆಸಿ, ಸಾಫಲ್ಯ ಪರೀಕ್ಷೆಯ ಫಲಿತಗಳ ಆಧಾರದ ಮೇಲೆ ಶೈಕ್ಷಣಿಕ ಯೋಜನೆಯನ್ನು ರೂಪಿಸಿ (SAP), ಪ್ರತಿ ವಿದ್ಯಾರ್ಥಿಯ ವಿಷಯವಾರು ಕಲಿಕಾ ಫಲಗಳ ಹಾಗೂ FLN ಕಲಿಕಾ ಫಲಗಳ ಸಾಧನೆಗೆ ಕ್ರಮವಹಿಸುವುದು.
- ಸೇತುಬಂಧ ಕಾರ್ಯಕ್ರಮದ ಅನುಷ್ಠಾನ ಸಂಬಂಧ ಈ ಕಛೇರಿಯಿಂದ ಪ್ರತ್ಯೇಕ ಸುತ್ತೋಲೆಯನ್ನು ನೀಡಲಾಗಿದೆ. **(E-12745 DSERT/EVG/ಸೇ.ಬಂ.ಸಾ/2025-26 ದಿ: 21-05-2025)** DSERT website ನಲ್ಲಿ ಪ್ರಕಟಿಸಲಾಗಿರುವ ಸುತ್ತೋಲೆ ಮತ್ತು ಸೇತುಬಂಧ ಸಾಹಿತ್ಯವನ್ನು ಬಳಸಿಕೊಳ್ಳುವುದು.

**1 ರಿಂದ 5ನೇ ತರಗತಿಗಳಿಗೆ ಮೌಲ್ಯಾಂಕನ ನಿರ್ವಹಣೆ:**

| ವಿವರ | ಅಂಕಗಳು | ಚಟುವಟಿಕೆ ನಿರ್ವಹಿಸಬೇಕಾದ ಅವಧಿ |
|---|---|---|
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ಮೊದಲನೇ ರೂಪಣಾತ್ಮಕ ಮೌಲ್ಯಾಂಕನ FA-1:**<br>➢ 1ನೇ ತರಗತಿಗೆ ಶೇ.10 ಹಾಗೂ 2 ರಿಂದ 5ನೇ ತರಗತಿಗಳಿಗೆ ಶೇ.20 ವಿಷಯವಾರು ಪಠ್ಯವನ್ನು FA-1 ಕ್ಕೆ ಪರಿಗಣಿಸುವುದು.<br>**(ದಿ:16-06-2025 ರಿಂದ 23-07-2025 ರವರೆಗಿನ ಪಠ್ಯ)**<br>➢ ಈ ಅವಧಿಯಲ್ಲಿ ನಿರ್ವಹಿಸಿದ ಪಾಠ ಆಧಾರಿತ ಮೌಲ್ಯಾಂಕನಗಳು, ಗೃಹಪಾಠಗಳು, Project ಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳನ್ನು ಕ್ರೋಢಿಕರಿಸಿ ಒಟ್ಟಾರೆ ಸಾಧನೆಯನ್ನು 15 ಅಂಕಗಳಿಗೆ ಪರಿವರ್ತಿಸುವುದು. | 15 | • ಪ್ರತಿ ಪಾಠದ ನಂತರ LBA ಪ್ರಶ್ನೆಕೋಠಿಯನ್ನಾಧರಿಸಿ 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು.<br>• ದಿ: 24-07-2025 ರಿಂದ 25-07-2025 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-1 ಮೌಲ್ಯಾಂಕನ ಹಮ್ಮಿಕೊಳ್ಳುವುದು. |
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ಎರಡನೇ ರೂಪಣಾತ್ಮಕ ಮೌಲ್ಯಾಂಕನ FA-2**:<br>➢ 1ನೇ ತರಗತಿಗೆ ಶೇ.15 ಹಾಗೂ 2 ರಿಂದ 5ನೇ ತರಗತಿಗಳಿಗೆ ಶೇ.15 ವಿಷಯವಾರು ಪಠ್ಯವನ್ನು FA-2 ಕ್ಕೆ ಪರಿಗಣಿಸುವುದು.<br>**(ದಿ:26-07-2025 ರಿಂದ 18-08-2025 ರವರೆಗಿನ ಪಠ್ಯ)**<br>➢ ಈ ಅವಧಿಯಲ್ಲಿ ನಿರ್ವಹಿಸಿದ ಪಾಠ ಆಧಾರಿತ ಮೌಲ್ಯಾಂಕನಗಳು, ಗೃಹಪಾಠಗಳು, Project ಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳನ್ನು ಕ್ರೋಢಿಕರಿಸಿ ಒಟ್ಟಾರೆ ಸಾಧನೆಯನ್ನು 15 ಅಂಕಗಳಿಗೆ ಪರಿವರ್ತಿಸುವುದು. | 15 | • ಪ್ರತಿ ಪಾಠದ ನಂತರ LBA ಪ್ರಶ್ನೆಕೋಠಿಯನ್ನಾಧರಿಸಿ 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು.<br>• ದಿ: 19-08-2025 ಮತ್ತು 20-08-2025 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-2 ಮೌಲ್ಯಾಂಕನ ಹಮ್ಮಿಕೊಳ್ಳುವುದು. |

| | | |
|---|---|---|
| **ಮೊದಲನೇ ಸಂಕಲನಾತ್ಮಕ ಮೌಲ್ಯಾಂಕನ SA-1:**<br>➢ 1ನೇ ತರಗತಿಗೆ ಸೆಪ್ಟೆಂಬರ್ ಮಾಹೆಯ ಶೇ.10 ಹಾಗೂ 2 ರಿಂದ 5ನೇ ತರಗತಿಗಳಿಗೆ ಶೇ.5 ಪಠ್ಯವನ್ನೊಳಗೊಂಡಂತೆ ಪಠ್ಯಪುಸ್ತಕದ ಶೇ.35 ಮತ್ತು ಶೇ.40 ರಷ್ಟು ವಿಷಯವಾರು ಪಠ್ಯವನ್ನು ಕ್ರಮವಾಗಿ 1ನೇ ತರಗತಿ ಹಾಗೂ 2 ರಿಂದ 5ನೇ ತರಗತಿಗಳಿಗೆ SA-1 ಕ್ಕೆ ಪರಿಗಣಿಸುವುದು.<br>**(ದಿ:16-06-2025 ರಿಂದ 11-09-2025 ರವರೆಗಿನ ಪಠ್ಯ)**<br>➢ ಎಲ್ಲಾ ಭಾಷೆ ಮತ್ತು ಕೋರ್ ವಿಷಯಗಳಿಗೆ 10 ಅಂಕಗಳಿಗೆ ಮೌಖಿಕ ಮತ್ತು 40 ಅಂಕಗಳಿಗೆ ಲಿಖಿತ, ಒಟ್ಟಾರೆ 50 ಅಂಕಗಳಿಗೆ ಮೌಲ್ಯಾಂಕನ ನಡೆಸಿ 20 ಅಂಕಗಳಿಗೆ ಪರಿವರ್ತಿಸುವುದು. | 20 | • ದಿ: 12-09-2025 ರಿಂದ 18-09-2025 ರವರೆಗೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಮೌಖಿಕ ಮತ್ತು ಲಿಖಿತ ಮೌಲ್ಯಾಂಕನ ಮಾಡುವುದು.<br>• ದಿ: 31-10-2025 ರಂದು ಪ್ರಾಥಮಿಕ ವಿಭಾಗದ ಮೊದಲನೇ ಸಮುದಾಯದತ್ತ ಶಾಲಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ **ಕೃತಿಸಂಪುಟ / ಉತ್ತರಪತ್ರಿಕೆಗಳ** ಮುಖೇನ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಪೋಷಕರೊಂದಿಗೆ ಹಂಚಿಕೊಳ್ಳುವುದು. |
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ಮೂರನೇ ರೂಪಣಾತ್ಮಕ ಮೌಲ್ಯಾಂಕನ FA-3**<br>➢ 1 ರಿಂದ 5ನೇ ತರಗತಿಗಳಿಗೆ ಶೇ.25 ವಿಷಯವಾರು ಪಠ್ಯವನ್ನು FA-3 ಕ್ಕೆ ಪರಿಗಣಿಸುವುದು.<br>**(ದಿ:08-10-2025 ರಿಂದ 23-11-2025 ರವರೆಗಿನ ಪಠ್ಯ)**<br>➢ ಈ ಅವಧಿಯಲ್ಲಿ ನಿರ್ವಹಿಸಿದ ಪಾಠ ಆಧಾರಿತ ಮೌಲ್ಯಾಂಕನಗಳು, ಗೃಹಪಾಠಗಳು, Project ಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳನ್ನು ಕ್ರೋಢಿಕರಿಸಿ ಒಟ್ಟಾರೆ ಸಾಧನೆಯನ್ನು 15 ಅಂಕಗಳಿಗೆ ಪರಿವರ್ತಿಸುವುದು. | 15 | • ಪ್ರತಿ ಪಾಠದ ನಂತರ LBA ಪ್ರಶ್ನೆಕೋಠಿಯನ್ನಾಧರಿಸಿ 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು.<br>• ದಿ: 24-11-2025 ರಿಂದ 26-11-2025 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-3 ಮೌಲ್ಯಾಂಕನ ಹಮ್ಮಿಕೊಳ್ಳುವುದು. |
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ನಾಲ್ಕನೇ ರೂಪಣಾತ್ಮಕ ಮೌಲ್ಯಾಂಕನ FA-4**<br>➢ 1 ರಿಂದ 5ನೇ ತರಗತಿಗಳಿಗೆ ಶೇ.20 ವಿಷಯವಾರು ಪಠ್ಯವನ್ನು FA-4 ಕ್ಕೆ ಪರಿಗಣಿಸುವುದು.<br>**(ದಿ:27-11-2024 ರಿಂದ 18-01-2026 ರವರೆಗಿನ ಪಠ್ಯ)**<br>➢ ಈ ಅವಧಿಯಲ್ಲಿ ನಿರ್ವಹಿಸಿದ ಪಾಠ ಆಧಾರಿತ ಮೌಲ್ಯಾಂಕನಗಳು, ಗೃಹಪಾಠಗಳು, Project ಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು | 15 | • ಪ್ರತಿ ಪಾಠದ ನಂತರ LBA ಪ್ರಶ್ನೆಕೋಠಿಯನ್ನಾಧರಿಸಿ 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು.<br>• ದಿ: 19-01-2026 ರಿಂದ 21-01-2026 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-4 ಮೌಲ್ಯಾಂಕನ ಹಮ್ಮಿಕೊಳ್ಳುವುದು. |

| | | |
|---|---|---|
| ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳನ್ನು ಕ್ರೋಢಿಕರಿಸಿ ಒಟ್ಟಾರೆ ಸಾಧನೆಯನ್ನು 15 ಅಂಕಗಳಿಗೆ ಪರಿವರ್ತಿಸುವುದು. | | |
| **1 ರಿಂದ 5ನೇ ತರಗತಿ: ಎರಡನೇ ಸಂಕಲನಾತ್ಮಕ ಮೌಲ್ಯಾಂಕನ SA-2**<br>➢ ಫೆಬ್ರುವರಿ ಮಾಹೆಯ 1ನೇ ತರಗತಿಯ ಶೇ.20 ಮತ್ತು 2 ರಿಂದ 5ನೇ ತರಗತಿಯ ಶೇ.15 ರಷ್ಟು ಪಠ್ಯವನ್ನು ಒಳಗೊಂಡಂತೆ 1 ನೇ ತರಗತಿಗೆ ಒಟ್ಟು ಶೇ.65 ಮತ್ತು 2 ರಿಂದ 5ನೇ ತರಗತಿಗೆ ಶೇ.60 ರಷ್ಟು ಪಠ್ಯವನ್ನು SA-2 ಕ್ಕೆ ಪರಿಗಣಿಸುವುದು.<br>**(ದಿ:08-10-2025 ರಿಂದ 23-03-2026 ರವರೆಗಿನ ಪಠ್ಯ)**<br>➢ ಎಲ್ಲಾ ಭಾಷೆ ಮತ್ತು ಕೋರ್ ವಿಷಯಗಳಿಗೆ 10 ಅಂಕಗಳಿಗೆ ಮೌಖಿಕ ಮತ್ತು 40 ಅಂಕಗಳಿಗೆ ಲಿಖಿತ, ಒಟ್ಟಾರೆ 50 ಅಂಕಗಳಿಗೆ ಮೌಲ್ಯಾಂಕನ ನಡೆಸಿ 20 ಅಂಕಗಳಿಗೆ ಪರಿವರ್ತಿಸುವುದು.<br>➢ ಶಾಲೆಗಳಿಂದ SATS ನಲ್ಲಿ ದಾಖಲಿಸಿರುವ FA-1, FA-2, FA-3, FA-4 ಮತ್ತು SA-1 ಅಂಕಗಳೊಂದಿಗೆ SA-2 ನ ಪರಿವರ್ತಿಸಿದ 20 ಅಂಕಗಳನ್ನು ಮೇಲ್ಕಂಡಂತೆ ಪರಿಗಣಿಸಿ, ಅಂತಿಮವಾಗಿ ಫಲಿತಾಂಶ ನಿರ್ಣಯಿಸಲು ಅಂಕಗಳನ್ನು 15+15+15+15+20+20=100 ರಂತೆ ಪರಿಗಣಿಸುವುದು. | 20 | ದಿ: 24-03-2026 ರಿಂದ 31-03-2026 ರವರೆಗೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಮೌಖಿಕ ಮತ್ತು ಲಿಖಿತ ಮೌಲ್ಯಾಂಕನ ಮಾಡುವುದು. |
| **ಒಟ್ಟು ಫಲಿತಾಂಶ** | ಒಟ್ಟು 100 ಅಂಕಗಳಿಗೆ | ದಿ: 08-04-2026 ರಂದು ನಡೆಯುವ ಪ್ರಾಥಮಿಕ ಶಾಲಾ ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ಫಲಿತಾಂಶ ಪ್ರಕಟಿಸುವುದು ಹಾಗೂ **ಕೃತಿಸಂಪುಟ / ಉತ್ತರ ಪತ್ರಿಕೆಗಳ** ಮುಖೇನ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು SDMC ಹಾಗೂ ಪೋಷಕರೊಂದಿಗೆ ಹಂಚಿಕೊಳ್ಳುವುದು. |

**6 ರಿಂದ 8ನೇ ತರಗತಿಗಳಿಗೆ ಮೌಲ್ಯಾಂಕನ ನಿರ್ವಹಣೆ:**

| | | |
|---|---|---|
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ಮೊದಲನೇ ರೂಪಣಾತ್ಮಕ ಮೌಲ್ಯಾಂಕನ FA-1:**<br>➢ 6 ರಿಂದ 8ನೇ ತರಗತಿಗಳಿಗೆ ವಿಷಯವಾರು ಪಠ್ಯಪುಸ್ತಕದ ಶೇ.20 ರಷ್ಟು ಪಠ್ಯವನ್ನು FA-1 ಕ್ಕೆ ಪರಿಗಣಿಸುವುದು.<br>**(ದಿ:16-06-2025 ರಿಂದ 23-07-2025 ರವರೆಗಿನ ಪಠ್ಯ)**<br>➢ ಈ ಅವಧಿಯಲ್ಲಿ ನಿರ್ವಹಿಸಿದ ಪಾಠ ಆಧಾರಿತ ಮೌಲ್ಯಾಂಕನಗಳು, ಗೃಹಪಾಠಗಳು, Project ಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳನ್ನು ಕ್ರೋಢಿಕರಿಸಿ ಒಟ್ಟಾರೆ ಸಾಧನೆಯನ್ನು 10 ಅಂಕಗಳಿಗೆ ಪರಿವರ್ತಿಸುವುದು. | 10 | • ಕನ್ನಡ ಮಾಧ್ಯಮ ಶಾಲೆಗಳು ಪ್ರತಿ ಪಾಠದ ನಂತರ LBA ಪ್ರಶ್ನೆಕೋಠಿಯನ್ನು ಆಧರಿಸಿ 20 ಅಂಕಗಳಿಗೆ ಹಾಗೂ ಮರುಸಿಂಚನ ದಿಂದ 05 ಅಂಕಗಳಿಗೆ ಒಟ್ಟು 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು.<br>• ಉಳಿದ ಮಾಧ್ಯಮದ ಶಾಲೆಗಳುLBA ಪ್ರಶ್ನೆಕೋಠಿಯನ್ನು ಆಧರಿಸಿ 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು.<br>• ದಿ: 24-07-2025 ರಿಂದ 25-07-2025 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-1 ಮೌಲ್ಯಾಂಕನ ಹಮ್ಮಿಕೊಳ್ಳುವುದು. |
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ಎರಡನೇ ರೂಪಣಾತ್ಮಕ ಮೌಲ್ಯಾಂಕನ FA-2:**<br>➢ 6 ರಿಂದ 8ನೇ ತರಗತಿಗಳಿಗೆ FA-1 ರ ನಂತರದ ವಿಷಯವಾರು ಶೇ.15 ರಷ್ಟು ಪಠ್ಯವನ್ನು FA-2 ಕ್ಕೆ ಪರಿಗಣಿಸುವುದು.<br>**(ದಿ:26-07-2025 ರಿಂದ 18-08-2025 ರವರೆಗಿನ ಪಠ್ಯ)**<br>➢ ಈ ಅವಧಿಯಲ್ಲಿ ನಿರ್ವಹಿಸಿದ ಪಾಠ ಆಧಾರಿತ ಮೌಲ್ಯಾಂಕನಗಳು, ಗೃಹಪಾಠಗಳು, Project ಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳನ್ನು ಕ್ರೋಢಿಕರಿಸಿ ಒಟ್ಟಾರೆ ಸಾಧನೆಯನ್ನು 10 ಅಂಕಗಳಿಗೆ ಪರಿವರ್ತಿಸುವುದು. | 10 | • ಕನ್ನಡ ಮಾಧ್ಯಮ ಶಾಲೆಗಳು ಪ್ರತಿ ಪಾಠದ ನಂತರ LBA ಪ್ರಶ್ನೆಕೋಠಿಯನ್ನು ಆಧರಿಸಿ 20 ಅಂಕಗಳಿಗೆ ಹಾಗೂ ಮರುಸಿಂಚನ ದಿಂದ 05 ಅಂಕಗಳಿಗೆ ಒಟ್ಟು 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು.<br>• ಉಳಿದ ಮಾಧ್ಯಮದ ಶಾಲೆಗಳುLBA ಪ್ರಶ್ನೆಕೋಠಿಯನ್ನು ಆಧರಿಸಿ 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು.<br>• ದಿ: 19-08-2025 ಮತ್ತು 20-08-2025 ರವರೆಗೆ ಆಯಾ ವಿಷಯದ |

| | | |
|---|---|---|
| | | ಬೋಧನಾ ಅವಧಿಯಲ್ಲಿ FA-2 ಮೌಲ್ಯಾಂಕನ ಹಮ್ಮಿಕೊಳ್ಳುವುದು. |
| **ಮೊದಲನೇ ಸಂಕಲನಾತ್ಮಕ ಮೌಲ್ಯಾಂಕನ SA-1:**<br>➢ ಸೆಪ್ಟೆಂಬರ್ ಮಾಹೆಯ ಶೇ.5 ಪಠ್ಯವನ್ನೊಳಗೊಂಡಂತೆ ಪಠ್ಯಪುಸ್ತಕದ ಶೇ.40 ರಷ್ಟು ವಿಷಯವಾರು ಪಠ್ಯವನ್ನು SA-1 ಕ್ಕೆ ಪರಿಗಣಿಸುವುದು.<br>**(ದಿ:16-06-2025 ರಿಂದ 11-09-2025 ರವರೆಗಿನ ಪಠ್ಯ)**<br>➢ ಮೌಲ್ಯಾಂಕನಕ್ಕೆ ಎಲ್ಲಾ ಭಾಷೆ ಮತ್ತು ಕೋರ್ ವಿಷಯಗಳಿಗೆ 10 ಅಂಕಗಳಿಗೆ ಮೌಖಿಕ ಮತ್ತು 40 ಅಂಕಗಳಿಗೆ ಲಿಖಿತ, ಒಟ್ಟಾರೆ 50 ಅಂಕಗಳಿಗೆ ನಡೆಸಿ ನಂತರ 30 ಅಂಕಗಳಿಗೆ ಪರಿವರ್ತಿಸುವುದು. | 30 | • ದಿ: 12-09-2025 ರಿಂದ 18-09-2025 ರವರೆಗೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಮೌಖಿಕ ಮತ್ತು ಲಿಖಿತ ಮೌಲ್ಯಾಂಕನ ಮಾಡುವುದು.<br>• ದಿ: 31-10-2025 ರಂದು ಪ್ರಾಥಮಿಕ ಶಾಲೆ ಹಾಗೂ ಪ್ರೌಢ ಶಾಲಾ ವಿಭಾಗದ ಮೊದಲನೇ ಸಮುದಾಯದತ್ತ ಶಾಲಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ **ಕೃತಿಸಂಪುಟ / ಉತ್ತರ ಪತ್ರಿಕೆಗಳ** ಮುಖೇನ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಪೋಷಕರೊಂದಿಗೆ ಹಂಚಿಕೊಳ್ಳುವುದು. |
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ಮೂರನೇ ರೂಪಣಾತ್ಮಕ ಮೌಲ್ಯಾಂಕನ FA-3**<br>➢ ಶೇ.25 ರಷ್ಟು ಪಠ್ಯವನ್ನು FA-3 ಕ್ಕೆ ಪರಿಗಣಿಸುವುದು.<br>**(ದಿ:08-10-2025 ರಿಂದ 23-11-2025 ರವರೆಗಿನ ಪಠ್ಯ)**<br>➢ ಈ ಅವಧಿಯಲ್ಲಿ ನಿರ್ವಹಿಸಿದ ಪಾಠ ಆಧಾರಿತ ಮೌಲ್ಯಾಂಕನಗಳು, ಗೃಹಪಾಠಗಳು, Project ಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳನ್ನು ಕ್ರೋಢಿಕರಿಸಿ ಒಟ್ಟಾರೆ ಸಾಧನೆಯನ್ನು 10 ಅಂಕಗಳಿಗೆ ಪರಿವರ್ತಿಸುವುದು. | 10 | • ಕನ್ನಡ ಮಾಧ್ಯಮ ಶಾಲೆಗಳು ಪ್ರತಿ ಪಾಠದ ನಂತರ LBA ಪ್ರಶ್ನೆಕೋಠಿಯನ್ನು ಆಧರಿಸಿ 20 ಅಂಕಗಳಿಗೆ ಹಾಗೂ ಮರುಸಿಂಚನ ದಿಂದ 05 ಅಂಕಗಳಿಗೆ ಒಟ್ಟು 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು.<br>• ಉಳಿದ ಮಾಧ್ಯಮದ ಶಾಲೆಗಳುLBA ಪ್ರಶ್ನೆಕೋಠಿಯನ್ನು ಆಧರಿಸಿ 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು.<br>• ದಿ: 24-11-2025 ರಿಂದ 26-11-2025 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-3 ಮೌಲ್ಯಾಂಕನ ಹಮ್ಮಿಕೊಳ್ಳುವುದು. |

| | | |
|---|---|---|
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ನಾಲ್ಕನೇ ರೂಪಣಾತ್ಮಕ ಮೌಲ್ಯಾಂಕನ FA-4**<br>➢ ಶೇ.20 ರಷ್ಟು ಪಠ್ಯವನ್ನು FA-4 ಕ್ಕೆ ಪರಿಗಣಿಸುವುದು.<br>**(ದಿ:27-11-2024 ರಿಂದ 18-01-2026 ರವರೆಗಿನ ಪಠ್ಯ)**<br>➢ ಈ ಅವಧಿಯಲ್ಲಿ ನಿರ್ವಹಿಸಿದ ಪಾಠ ಆಧಾರಿತ ಮೌಲ್ಯಾಂಕನಗಳು, ಗೃಹಪಾಠಗಳು, Project ಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳನ್ನು ಕ್ರೋಢಿಕರಿಸಿ ಒಟ್ಟಾರೆ ಸಾಧನೆಯನ್ನು 10 ಅಂಕಗಳಿಗೆ ಪರಿವರ್ತಿಸುವುದು. | 10 | • ಕನ್ನಡ ಮಾಧ್ಯಮ ಶಾಲೆಗಳು ಪ್ರತಿ ಪಾಠದ ನಂತರ LBA ಪ್ರಶ್ನೆಕೋಠಿಯನ್ನು ಆಧರಿಸಿ 20 ಅಂಕಗಳಿಗೆ ಹಾಗೂ ಮರುಸಿಂಚನ ದಿಂದ 05 ಅಂಕಗಳಿಗೆ ಒಟ್ಟು 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು.<br>• ಉಳಿದ ಮಾಧ್ಯಮದ ಶಾಲೆಗಳುLBA ಪ್ರಶ್ನೆಕೋಠಿಯನ್ನು ಆಧರಿಸಿ 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು.<br>• ದಿ: 19-01-2026 ರಿಂದ 21-01-2026 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-4 ಮೌಲ್ಯಾಂಕನ ಹಮ್ಮಿಕೊಳ್ಳುವುದು. |
| **ಎರಡನೇ ಸಂಕಲನಾತ್ಮಕ ಮೌಲ್ಯಾಂಕನ SA-2**<br>➢ ಫೆಬ್ರುವರಿ ಮಾಹೆಯ ಶೇ.15 ರಷ್ಟು ಪಠ್ಯವನ್ನು ಒಳಗೊಂಡಂತೆ 6 ಮತ್ತು 7ನೇ ತರಗತಿಗಳಿಗೆ ಪಠ್ಯಪುಸ್ತಕದ ಶೇ.60 ರಷ್ಟು ವಿಷಯವಾರು ಪಠ್ಯವನ್ನು SA-2 ಕ್ಕೆ ಪರಿಗಣಿಸುವುದು.<br>**(ದಿ:08-10-2025 ರಿಂದ 23-03-2026 ರವರೆಗಿನ ಪಠ್ಯ)**<br>➢ ಎಲ್ಲಾ ಭಾಷೆ ಮತ್ತು ಕೋರ್ ವಿಷಯಗಳಿಗೆ 10 ಅಂಕಗಳಿಗೆ ಮೌಖಿಕ ಮತ್ತು 40 ಅಂಕಗಳಿಗೆ ಲಿಖಿತ, ಒಟ್ಟಾರೆ 50 ಅಂಕಗಳಿಗೆ ನಡೆಸಿ ನಂತರ 30 ಅಂಕಗಳಿಗೆ ಪರಿವರ್ತಿಸುವುದು.<br>➢ ಅಂತಿಮವಾಗಿ ಫಲಿತಾಂಶ ನಿರ್ಣಯಿಸಲು FA-1, FA-2, FA-3, FA-4, SA-1 ಮತ್ತು SA-2 ಗಳ ಅಂಕಗಳಿಗೆ 10+10+10+10+30+30=100 ರಂತೆ ಪರಿಗಣಿಸಿ ಫಲಿತಾಂಶ ನಿರ್ಣಯಿಸುವುದು.. | 30 | ದಿ: 24-03-2026 ರಿಂದ 31-03-2026 ರವರೆಗೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಮೌಖಿಕ ಮತ್ತು ಲಿಖಿತ ಮೌಲ್ಯಾಂಕನ ಮಾಡುವುದು. |

| | | |
|---|---|---|
| **8ನೇ ತರಗತಿ: ಎರಡನೇ ಸಂಕಲನಾತ್ಮಕ ಮೌಲ್ಯಾಂಕನ SA-2**<br>➢ ಫೆಬ್ರುವರಿ ಮಾಹೆಯ ಶೇ.15 ರಷ್ಟು ಪಠ್ಯವನ್ನು ಒಳಗೊಂಡಂತೆ 8ನೇ ತರಗತಿಗೆ ಜೂನ್-2025 ರಿಂದ ಮಾರ್ಚ್-2026 ರವರೆಗಿನ ವಾರ್ಷಿಕ ಪಠ್ಯವನ್ನು ಪರಿಗಣಿಸುವುದು<br>**(ದಿ: 16-06-2025 ರಿಂದ 23-03-2026 ರವರೆಗೆ)**<br>➢ ಎಲ್ಲಾ ಭಾಷೆ ಮತ್ತು ಕೋರ್ ವಿಷಯಗಳಿಗೆ 10 ಅಂಕಗಳಿಗೆ ಮೌಖಿಕ ಮತ್ತು 50 ಅಂಕಗಳಿಗೆ ಲಿಖಿತ, ಒಟ್ಟಾರೆ 60 ಅಂಕಗಳಿಗೆ ನಡೆಸಿ ನಂತರ 30 ಅಂಕಗಳಿಗೆ ಪರಿವರ್ತಿಸುವುದು.<br>➢ ಅಂತಿಮವಾಗಿ ಫಲಿತಾಂಶ ನಿರ್ಣಯಿಸಲು FA-1, FA-2, FA-3, FA-4, SA-1 ಮತ್ತು SA-2 ಗಳ ಅಂಕಗಳಿಗೆ 10+10+10+10+30+30=100 ರಂತೆ ಪರಿಗಣಿಸಿ ಫಲಿತಾಂಶ ನಿರ್ಣಯಿಸುವುದು. | 30 | ದಿ: 24-03-2026 ರಿಂದ 31-03-2026 ರವರೆಗೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಮೌಖಿಕ ಮತ್ತು ಲಿಖಿತ ಮೌಲ್ಯಾಂಕನ ಮಾಡುವುದು. |
| **ಒಟ್ಟು ಫಲಿತಾಂಶ** | ಒಟ್ಟು 100 ಅಂಕಗಳಿಗೆ | ದಿ: 08-04-2026 ಪ್ರಾಥಮಿಕ ಶಾಲಾ ವಿಭಾಗ ಮತ್ತು 09-04-2026 ಪ್ರೌಢ ಶಾಲಾ ವಿಭಾಗ ನಡೆಯುವ ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ಪೋಷಕರ ಹಾಗೂ SDMC ಸಭೆ ಕರೆದು ಫಲಿತಾಂಶ ಪ್ರಕಟಿಸುವುದು ಹಾಗೂ ಮುಂದಿನ ವರ್ಷದ ಶಾಲಾ ಶೈಕ್ಷಣಿಕ ಯೋಜನೆಯನ್ನು ಮಂಡಿಸುವುದು. |

**9 & 10 ನೇ ತರಗತಿಗಳಿಗೆ ಮೌಲ್ಯಾಂಕನ ನಿರ್ವಹಣೆ:**

| | | |
|---|---|---|
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ಮೊದಲನೇ ರೂಪಣಾತ್ಮಕ ಮೌಲ್ಯಾಂಕನ FA-1**<br>➢ 9ನೇ ತರಗತಿಗೆ ಶೇ.20 ಮತ್ತು 10ನೇ ತರಗತಿಗೆ ಶೇ.25 ರಷ್ಟು ಪಠ್ಯವನ್ನು FA-1 ಕ್ಕೆ ಪರಿಗಣಿಸುವುದು.<br>**(ದಿ:16-06-2025 ರಿಂದ 23-07-2025 ರವರೆಗಿನ ಪಠ್ಯ)**<br>➢ 2 ಚಟುವಟಿಕೆ / ಯೋಜನೆ 15+15 ಅಂಕಗಳು ಹಾಗೂ 1 ಲಿಖಿತ ಪರೀಕ್ಷೆ 20 ಅಂಕಗಳು. | 50 | • ಕನ್ನಡ ಮಾಧ್ಯಮ ಶಾಲೆಗಳು ಪ್ರತಿ ಪಾಠದ ನಂತರ LBA ಪ್ರಶ್ನೆಕೋಠಿಯನ್ನು ಆಧರಿಸಿ 20 ಅಂಕಗಳಿಗೆ ಹಾಗೂ ಮರುಸಿಂಚನ ದಿಂದ 05 ಅಂಕಗಳಿಗೆ ಒಟ್ಟು 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು.<br>• ಉಳಿದ ಮಾಧ್ಯಮದ |

| | | |
|---|---|---|
| ➢ ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು. | | ಶಾಲೆಗಳುLBA ಪ್ರಶ್ನೆಕೋಠಿಯನ್ನು ಆಧರಿಸಿ 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು.<br>• ದಿ: 24-07-2025 ರಿಂದ 25-07-2025 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-1 ಮೌಲ್ಯಾಂಕನ ಹಮ್ಮಿಕೊಳ್ಳುವುದು. |
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ಎರಡನೇ ರೂಪಣಾತ್ಮಕ ಮೌಲ್ಯಾಂಕನ FA-2**<br>➢ 9 ಮತ್ತು 10ನೇ ತರಗತಿಗಳಿಗೆ ವಿಷಯವಾರು FA-1 ರ ನಂತರದ ಶೇ.15 ರಷ್ಟು ಪಠ್ಯವನ್ನು FA-2 ಕ್ಕೆ ಪರಿಗಣಿಸುವುದು.<br>**(ದಿ:26-07-2025 ರಿಂದ 18-08-2025 ರವರೆಗಿನ ಪಠ್ಯ)**<br>➢ 2 ಚಟುವಟಿಕೆ / ಯೋಜನೆ 15+15 ಅಂಕಗಳು ಹಾಗೂ 1 ಲಿಖಿತ ಪರೀಕ್ಷೆ 20 ಅಂಕಗಳು.<br>➢ ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು. | 50 | • ಕನ್ನಡ ಮಾಧ್ಯಮ ಶಾಲೆಗಳು ಪ್ರತಿ ಪಾಠದ ನಂತರ LBA ಪ್ರಶ್ನೆಕೋಠಿಯನ್ನು ಆಧರಿಸಿ 20 ಅಂಕಗಳಿಗೆ ಹಾಗೂ ಮರುಸಿಂಚನ ದಿಂದ 05 ಅಂಕಗಳಿಗೆ ಒಟ್ಟು 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು.<br>• ಉಳಿದ ಮಾಧ್ಯಮದ ಶಾಲೆಗಳುLBA ಪ್ರಶ್ನೆಕೋಠಿಯನ್ನು ಆಧರಿಸಿ 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು.<br>• ದಿ: 19-08-2025 ಮತ್ತು 20-08-2025 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-2 ಮೌಲ್ಯಾಂಕನ ಹಮ್ಮಿಕೊಳ್ಳುವುದು. |
| **ಮೊದಲನೇ ಸಂಕಲನಾತ್ಮಕ ಮೌಲ್ಯಾಂಕನ SA-1**<br>➢ ಸೆಪ್ಟೆಂಬರ್ ಮಾಹೆಯ ಶೇ.5 ರಷ್ಟು ಪಠ್ಯವನ್ನೊಳಗೊಂಡಂತೆ ಆಯಾ ತರಗತಿ ಮತ್ತು ವಿಷಯಕ್ಕೆ ನಿಗದಿಪಡಿಸಿದ ಶೇ.40 ಮತ್ತು ಶೇ.45 ರಷ್ಟು ಪಠ್ಯವನ್ನು ಕ್ರಮವಾಗಿ 9 ಮತ್ತು 10ನೇ ತರಗತಿಗಳಿಗೆ ಪರಿಗಣಿಸುವುದು.<br>**(ದಿ:16-06-2025 ರಿಂದ 11-09-2025 ರವರೆಗಿನ ಪಠ್ಯ)**<br>➢ ಪ್ರಥಮ ಭಾಷೆಗೆ 100 ಅಂಕಗಳು, ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 80 ಅಂಕಗಳಿಗೆ ಅಂದರೆ 100+80+80+80+80+80=500 ಅಂಕಗಳಿಗೆ ಲಿಖಿತ | 625 | • ದಿ: 12-09-2025 ರಿಂದ 18-09-2025 ರವರೆಗೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಮೌಲ್ಯಾಂಕನ ಮಾಡುವುದು.<br>• ದಿನಾಂಕ: 31-10-2025 ರಂದು ಪ್ರೌಢ ಶಾಲಾ ವಿಭಾಗದ ಮೊದಲನೇ ಸಮುದಾಯದತ್ತ ಶಾಲಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ **ಕೃತಿಸಂಪುಟ / ಉತ್ತರ ಪತ್ರಿಕೆಗಳ** ಮುಖೇನ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಪೋಷಕರೊಂದಿಗೆ |

| | | |
|---|---|---|
| ಪರೀಕ್ಷೆಯನ್ನು ನಡೆಸುವುದು.<br>**ಆಂತರಿಕ ಮೌಲ್ಯಾಂಕನ:** ಎರಡು ರೂಪಣಾತ್ಮಕ ಮೌಲ್ಯಾಂಕನಗಳ (FA 1 + FA 2) ಒಟ್ಟು 100 ಅಂಕಗಳನ್ನು ಪ್ರಥಮ ಭಾಷೆಗೆ 25 ಹಾಗೂ ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 20 ಅಂಕಗಳಿಗೆ ಅಂದರೆ 25+20+20+20+20+20=125 ಪರಿವರ್ತಿಸಿ ಆಂತರಿಕ ಮೌಲ್ಯಾಂಕನಕ್ಕೆ ಪರಿಗಣಿಸುವುದು. | | ಹಂಚಿಕೊಳ್ಳುವುದು. |
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ಮೂರನೇ ರೂಪಣಾತ್ಮಕ ಮೌಲ್ಯಾಂಕನ FA-3**<br>➢ 9ನೇ ತರಗತಿಗೆ ಶೇ.25 ಮತ್ತು 10ನೇ ತರಗತಿಗೆ ಶೇ.30 ರಷ್ಟು ಪಠ್ಯವನ್ನು FA-3 ಕ್ಕೆ ಪರಿಗಣಿಸುವುದು.<br>**(ದಿ:08-10-2025 ರಿಂದ 23-11-2025 ರವರೆಗಿನ ಪಠ್ಯ)**<br>➢ 2 ಚಟುವಟಿಕೆ / ಯೋಜನೆ 15+15 ಅಂಕಗಳು ಹಾಗೂ 1 ಲಿಖಿತ ಪರೀಕ್ಷೆ 20 ಅಂಕಗಳು.<br>➢ ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು. | 50 | • ಕನ್ನಡ ಮಾಧ್ಯಮ ಶಾಲೆಗಳು ಪ್ರತಿ ಪಾಠದ ನಂತರ LBA ಪ್ರಶ್ನೆಕೋಠಿಯನ್ನು ಆಧರಿಸಿ 20 ಅಂಕಗಳಿಗೆ ಹಾಗೂ ಮರುಸಿಂಚನ ದಿಂದ 05 ಅಂಕಗಳಿಗೆ ಒಟ್ಟು 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು.<br>• ಉಳಿದ ಮಾಧ್ಯಮದ ಶಾಲೆಗಳುLBA ಪ್ರಶ್ನೆಕೋಠಿಯನ್ನು ಆಧರಿಸಿ 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು.<br>• ದಿ: 24-11-2025 ರಿಂದ 26-11-2025 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-3 ಮೌಲ್ಯಾಂಕನ ಹಮ್ಮಿಕೊಳ್ಳುವುದು. |
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ನಾಲ್ಕನೇ ರೂಪಣಾತ್ಮಕ ಮೌಲ್ಯಾಂಕನ FA-4**<br>➢ 9ನೇ ತರಗತಿಗೆ ಶೇ.30 ಮತ್ತು 10ನೇ ತರಗತಿಗೆ ಶೇ.25 ರಷ್ಟು ಪಠ್ಯವನ್ನು FA-4ಕ್ಕೆ ಪರಿಗಣಿಸುವುದು.<br>**(ದಿ:27-11-2024 ರಿಂದ 18-01-2026 ರವರೆಗಿನ ಪಠ್ಯ)**<br>➢ 2 ಚಟುವಟಿಕೆ / ಯೋಜನೆ 15+15 ಅಂಕಗಳು ಹಾಗೂ 1 ಲಿಖಿತ ಪರೀಕ್ಷೆ 20 ಅಂಕಗಳು.<br>➢ ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು. | 50 | • ಕನ್ನಡ ಮಾಧ್ಯಮ ಶಾಲೆಗಳು ಪ್ರತಿ ಪಾಠದ ನಂತರ LBA ಪ್ರಶ್ನೆಕೋಠಿಯನ್ನು ಆಧರಿಸಿ 20 ಅಂಕಗಳಿಗೆ ಹಾಗೂ ಮರುಸಿಂಚನ ದಿಂದ 05 ಅಂಕಗಳಿಗೆ ಒಟ್ಟು 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು.<br>• ಉಳಿದ ಮಾಧ್ಯಮದ ಶಾಲೆಗಳುLBA ಪ್ರಶ್ನೆಕೋಠಿಯನ್ನು ಆಧರಿಸಿ 25 ಅಂಕಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು. |

| | | |
|---|---|---|
| **9ನೇ ತರಗತಿಗೆ ಶೇ.5 ರಷ್ಟು ಪಠ್ಯವನ್ನು ಒಳಗೊಂಡಂತೆ ಶೇ.100 ರಷ್ಟು ಪಠ್ಯವನ್ನು ಪರಿಗಣಿಸಿ ಪೂರ್ವ ಸಿದ್ಧತಾ ಪರೀಕ್ಷೆ**<br>➢ ಪ್ರಥಮ ಭಾಷೆ 100 ಲಿಖಿತ + 25 ಆಂತರಿಕ =125 ಅಂಕಗಳಿಗೆ ಪರೀಕ್ಷೆ ನಡೆಸುವುದು.<br>➢ ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 80 ಲಿಖಿತ + 20 ಆಂತರಿಕ = 100 ಅಂಕಗಳಿಗೆ ಪರೀಕ್ಷೆ ನಡೆಸುವುದು.<br>**(ಸೂಚನೆ: ಕೇವಲ ಅಭ್ಯಾಸಕ್ಕೆ ಮಾತ್ರ).** | ಒಟ್ಟು 625 ಅಂಕಗಳಿಗೆ | ದಿ: 18-02-2026 ರಿಂದ 25-02-2026 ರವರೆಗೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಮೌಲ್ಯಾಂಕನ ಮಾಡುವುದು. |
| **ಎರಡನೇ ಸಂಕಲನಾತ್ಮಕ ಮೌಲ್ಯಾಂಕನ SA 2**<br>➢ ಉಳಿದ ಶೇ.5 ರಷ್ಟು ಪಠ್ಯವನ್ನೊಳಗೊಂಡಂತೆ, 9ನೇ ತರಗತಿಯ SA-2 ಮೌಲ್ಯಾಂಕನಕ್ಕೆ ಆಯಾ ಭಾಷೆ ಹಾಗೂ 3 ಕೋರ್ ವಿಷಯಗಳಿಗೆ ನಿಗದಿಪಡಿಸಿದ ವಾರ್ಷಿಕ ಶೇ.100 ರಷ್ಟು ಪಠ್ಯವನ್ನು ಪರಿಗಣಿಸುವುದು.<br>**(ದಿ: 16-06-2025 ರಿಂದ 23-03-2026 ರವರೆಗೆ)**<br>➢ **ಆಂತರಿಕ ಮೌಲ್ಯಾಂಕನ:** ನಾಲ್ಕು ರೂಪಣಾತ್ಮಕ ಮೌಲ್ಯಾಂಕನಗಳ (FA-1+FA-2+FA-3+FA-4) = 50+50+50+50 = ಒಟ್ಟು 200 ಅಂಕಗಳಿಗೆ ನಿರ್ವಹಿಸಿ ನಂತರ ಪ್ರಥಮ ಭಾಷೆ 25 ಅಂಕಗಳಿಗೆ ಹಾಗೂ ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ 3 ಕೋರ್ ವಿಷಯಗಳಿಗೆ ತಲಾ 20 ಅಂಕಗಳಿಗೆ ಪರಿವರ್ತಿಸಿ ಅಂದರೆ 25+20+20+20+20+20 = ಒಟ್ಟು 125 ಅಂಕಗಳನ್ನು ಆಂತರಿಕ ಮೌಲ್ಯಾಂಕನಕ್ಕೆ ಪರಿಗಣಿಸುವುದು.<br>➢ **SA-2 ಮೌಲ್ಯಾಂಕನ:** ಪ್ರಥಮ ಭಾಷೆಗೆ 100 ಅಂಕಗಳು, ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ ತಲಾ 80 ಅಂಕಗಳಿಗೆ ಅಂದರೆ 100+80+80+80+80+80 = ಒಟ್ಟು 500 ಅಂಕಗಳಿಗೆ ಮೌಲ್ಯಾಂಕನ / ಲಿಖಿತ ಪರೀಕ್ಷೆಯನ್ನು ನಡೆಸುವುದು.<br>ಅಂತಿಮವಾಗಿ ಫಲಿತಾಂಶ ನಿರ್ಧರಿಸಲು ಆಂತರಿಕ ಮೌಲ್ಯಾಂಕನದ ಅಂಕಗಳು ಮತ್ತು SA-2 ಮೌಲ್ಯಾಂಕನದ ಲಿಖಿತ ಪರೀಕ್ಷೆಯ ಅಂಕಗಳನ್ನು (125+500=625) ಪರಿಗಣಿಸುವುದು. | 625 | • ದಿ: 24-03-2026 ರಿಂದ 31-03-2026 ರವರೆಗೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಮೌಲ್ಯಾಂಕನ ಮಾಡುವುದು.<br>• ದಿ: 09-03-2026 ರಂದು ನಡೆಯುವ ಪ್ರೌಢಶಾಲೆಯ ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ 8 ಮತ್ತು 9ನೇ ತರಗತಿಯ ಫಲಿತಾಂಶ ಪ್ರಕಟಿಸುವುದು ಹಾಗೂ ವಿದ್ಯಾರ್ಥಿಗಳ **ಕೃತಿಸಂಪುಟ / ಉತ್ತರ ಪತ್ರಿಕೆಗಳ** ಮುಖೇನ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಪೋಷಕರೊಂದಿಗೆ ಹಂಚಿಕೊಳ್ಳುವುದು. |

| | | |
|---|---|---|
| **10ನೇ ತರಗತಿಗೆ ಪೂರ್ವಸಿದ್ಧತಾ ಪರೀಕ್ಷೆ**<br>➢ 10ನೇ ತರಗತಿ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆಯ ಪೂರ್ವ ತಯಾರಿಗಾಗಿ ವಾರ್ಷಿಕ ಪಠ್ಯಕ್ಕೆ ಅನುಗುಣವಾಗಿ KSEAB ನಿರ್ದೇಶನದಂತೆ ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ನಿರ್ವಹಿಸುವುದು.<br>➢ ಪ್ರಥಮ ಭಾಷೆ 100 ಲಿಖಿತ + 25 ಆಂತರಿಕ =125 ಅಂಕಗಳಿಗೆ ಪರೀಕ್ಷೆ ನಡೆಸುವುದು.<br>➢ ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 80 ಲಿಖಿತ + 20 ಆಂತರಿಕ = 100 ಅಂಕಗಳಿಗೆ ಪರೀಕ್ಷೆ ನಡೆಸುವುದು. | ಒಟ್ಟು 625 ಅಂಕಗಳಿಗೆ | KSEAB ವತಿಯಿಂದ ಪ್ರಕಟಿಸುವ ವೇಳಾಪಟ್ಟಿಯಂತೆ 10ನೇ ತರಗತಿ ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ನಡೆಸುವುದು. |
| **10ನೇ ತರಗತಿ ಅಂತಿಮ ವಾರ್ಷಿಕ ಪರೀಕ್ಷೆ**<br>➢ ಪ್ರಥಮ ಭಾಷೆಗೆ 100 ಅಂಕಗಳು, ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 80 ಅಂಕಗಳಿಗೆ ಲಿಖಿತ ಪರೀಕ್ಷೆಯನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯಿಂದ (KSEAB) ನಡೆಸಲಾಗುವುದು.<br>➢ ನಾಲ್ಕು ರೂಪಣಾತ್ಮಕ ಮೌಲ್ಯಾಂಕನಗಳ (FA1+FA2+FA3+FA4) = ಒಟ್ಟು 200 ಅಂಕಗಳನ್ನು ಪ್ರಥಮ ಭಾಷೆಗೆ 25 ಅಂಕಗಳಿಗೆ ಹಾಗೂ ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 20 ಅಂಕಗಳಿಗೆ ಪರಿವರ್ತಿಸಿ ಆಂತರಿಕ ಮೌಲ್ಯಾಂಕನಕ್ಕೆ ಪರಿಗಣಿಸಲಾಗುವುದು.<br>➢ ಪ್ರಥಮ ಭಾಷೆ 100 ಲಿಖಿತ + 25 ಆಂತರಿಕ = 125 ಅಂಕಗಳು, ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 80 ಲಿಖಿತ + 20 ಆಂತರಿಕ = 100 ಅಂಕಗಳಿಗೆ ಮೌಲ್ಯಾಂಕನ ನಡೆಸಲಾಗುವುದು.<br>➢ ಆಂತರಿಕ ಮೌಲ್ಯಾಂಕನದ ಅಂಕಗಳು ಮತ್ತು KSEAB ಯಿಂದ ನಡೆಸಲಾಗುವ ವಾರ್ಷಿಕ ಪರೀಕ್ಷೆಯ ಅಂಕಗಳನ್ನು (125+500=625) ಪರಿಗಣಿಸಿ ಮಂಡಳಿಯಿಂದ ಫಲಿತಾಂಶವನ್ನು ಪ್ರಕಟಿಸಲಾಗುವುದು | 625 ಅಂಕಗಳಿಗೆ | KSEAB ವತಿಯಿಂದ ಪ್ರಕಟಿಸುವ ವೇಳಾಪಟ್ಟಿಯಂತೆ 10ನೇ ತರಗತಿ ಅಂತಿಮ ವಾರ್ಷಿಕ ಪರೀಕ್ಷೆ ನಡೆಸುವುದು. |

| 2025-26 ನೇ ಶೈಕ್ಷಣಿಕ ಸಾಲಿನ 1-10ನೇ ತರಗತಿಗಳಿಗೆ ಘಟಕ ಮೌಲ್ಯಾಂಕನ ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಾಂಕನ/ವಾರ್ಷಿಕ ಪರೀಕ್ಷೆಗೆ ನಿಗದಿಪಡಿಸಿದ ಶೇಕಡಾವಾರು ಪಠ್ಯಹಂಚಿಕೆ ವಿವರ | | | | | | | | |
|---|---|---|---|---|---|---|---|---|
| ಕ್ರ. ಸಂ | ತರಗತಿ | ಭಾಗ-1 | | | ಭಾಗ-2 | | | ಅಂತಿಮ ಒಟ್ಟು |
| | | ರೂ.ಮೌ-1 FA-1 % | ರೂ.ಮೌ-2 FA-2 % | ಸಂ.ಮೌ-1 SA 1 % | ರೂ.ಮೌ-3 FA 3 % | ರೂ.ಮೌ-4 FA-4 % | ಸಂ.ಮೌ-2 /ವಾರ್ಷಿಕ ಪರೀಕ್ಷೆ SA 2/ Annual Exam % | |
| 1 | 1ನೇ ತರಗತಿ **(ಕಲಿ-ನಲಿ/ Bilingual)** | 10 | 15 | 35 (ಸೆಪ್ಟೆಂಬರ್ 10%) | 25 | 20 | 65 (ಉಳಿದ ಶೇ.20 ಪಠ್ಯ) | 100 |
| 2 | 2-5ನೇ ತರಗತಿ | 20 | 15 | 40 (ಸೆಪ್ಟೆಂಬರ್ 5%) | 25 | 20 | 60 (ಉಳಿದ ಶೇ.15 ಪಠ್ಯ) | 100 |
| 3 | 6-7ನೇ ತರಗತಿ | 20 | 15 | 40 (ಸೆಪ್ಟೆಂಬರ್ 5%) | 25 | 20 | 60 (ಉಳಿದ ಶೇ.15 ಪಠ್ಯ) | 100 |
| 4 | 8ನೇ ತರಗತಿ | 20 | 15 | 40 (ಸೆಪ್ಟೆಂಬರ್ 5%) | 25 | 20 | 100 (ಉಳಿದ ಶೇ.15 ಪಠ್ಯ + ವಾರ್ಷಿಕ ಪಠ್ಯ ) | 100 |
| 4 | 9ನೇ ತರಗತಿ | 20 | 15 | 40 (ಸೆಪ್ಟೆಂಬರ್ 5%) | 25 | 30 | 100 (ಉಳಿದ ಶೇ.5 ಪಠ್ಯ + ವಾರ್ಷಿಕ ಪಠ್ಯ) | 100 |
| 5 | 10ನೇ ತರಗತಿ | 25 | 15 | 45 (ಸೆಪ್ಟೆಂಬರ್ 5%) | 30 | 25 | 100 | 100 |

**ಸೂಚನೆಗಳು:**

1. **DSERT website** ನಲ್ಲಿ **https://dsert.karnataka.gov.in** ಅಳವಡಿಸಲಾಗಿರುವ ತರಗತಿವಾರು/ವಿಷಯವಾರು ಸೇತುಬಂಧ ಸಾಹಿತ್ಯವನ್ನು ಬಳಸಿ ಸೇತುಬಂಧ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವುದು.
2. ಮೌಲ್ಯಾಂಕನ ಕಾರ್ಯವನ್ನು ನಿರ್ವಹಿಸಿ, ಸಾಂದರ್ಭಿಕವಾಗಿ ಸೃಜನೆಯಾಗುವ ವಿದ್ಯಾರ್ಥಿಗಳ ಉತ್ತಮ ಪ್ರಗತಿಯ ದಾಖಲೆಗಳನ್ನು ಮಕ್ಕಳ ಕೃತಿ ಸಂಪುಟದಲ್ಲಿ ಸಂಗ್ರಹಿಸಿಡುವುದು ಹಾಗೂ ಪೋಷಕರೊಂದಿಗೆ ಹಂಚಿಕೊಳ್ಳುವುದು.
3. ನಿಗದಿಪಡಿಸಿದ ಸಮಯದಲ್ಲಿ ಮೌಲ್ಯಾಂಕನ ಚಟುವಟಿಕೆಗಳನ್ನು ಕೈಗೊಳ್ಳುವುದು. ಯಾವುದೇ ಕಾರಣದಿಂದ ಮಗು ಆ ಸಮಯಕ್ಕೆ ಅಲಭ್ಯವಾದಲ್ಲಿ ಸಾಂದರ್ಭಿಕವಾಗಿ ಕ್ರಮವಹಿಸಿ, ಮಕ್ಕಳ ಕೃತಿ ಸಂಪುಟದಲ್ಲಿ ದಾಖಲಿಸಿರುವ ಚಟುವಟಿಕೆಗಳೊಂದಿಗೆ ಸಂಯೋಜನೆ ಮಾಡಿಕೊಂಡು ಆ ಮಗುವನ್ನು ಮೌಲ್ಯಾಂಕನಕ್ಕೆ ಒಳಪಡಿಸುವುದು.
4. ಪಾಠ ಆಧಾರಿತ ಮೌಲ್ಯಾಂಕನ (Unit Test) ಪೂರ್ಣಗೊಂಡ 2 ದಿನಗಳಲ್ಲಿ, ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಾಂಕನಗಳು ಪೂರ್ಣಗೊಂಡ 7 ದಿನಗಳೊಳಗೆ ವಿದ್ಯಾರ್ಥಿಗಳ ಪ್ರಗತಿಯನ್ನು SATS ತಂತ್ರಾಂಶದಲ್ಲಿ ಕಡ್ಡಾಯವಾಗಿ ನಮೂದಿಸುವುದು.

5. ಕ್ಲಸ್ಟರ್ ಹಂತದ CRP ಹಾಗೂ ಬ್ಲಾಕ್ ಹಂತದ ಅಧಿಕಾರಿಗಳು SATS ತಂತ್ರಾಂಶದಲ್ಲಿ ಪ್ರತಿ ಶಾಲೆಯು ಮೌಲ್ಯಾಂಕನ ದಾಖಲಿಸಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು ಹಾಗೂ ಅವಶ್ಯ ಮಾರ್ಗದರ್ಶನ ನೀಡುವುದು.
6. SATS ತಂತ್ರಾಂಶದಲ್ಲಿ ಲಭ್ಯವಿರುವ ವಿಶ್ಲೇಷಣಾ ವರದಿಯನ್ನು ಆಧರಿಸಿ ವಿದ್ಯಾರ್ಥಿಗಳು ಕಲಿಕೆಯನ್ನು ಸಾಧಿಸಲು ಜಿಲ್ಲೆಯ ಉಪನಿರ್ದೇಶಕರು, ಆಡಳಿತ ಹಾಗೂ ಅಭಿವೃದ್ಧಿ ರವರ ವ್ಯಾಪ್ತಿಗೆ ಒಳಪಡುವ ಎಲ್ಲಾ ಮೇಲ್ವಿಚಾರಣಾ ಅಧಿಕಾರಿಗಳು, ಜಿಲ್ಲೆ, ಬ್ಲಾಕ್ ಮತ್ತು ಕ್ಲಸ್ಟರ್ ಹಂತದ ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಶೈಕ್ಷಣಿಕವಾಗಿ ಅಗತ್ಯ ಮಾರ್ಗದರ್ಶನ ನೀಡುವುದು.
7. 1 ರಿಂದ 3ನೇ ತರಗತಿಗಳ ನಲಿ-ಕಲಿ ಘಟಕಗಳಲ್ಲಿ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಸಮಗ್ರ ಶಿಕ್ಷಣ ಕರ್ನಾಟಕದ ನಲಿ-ಕಲಿ ಕೋಶದ ವತಿಯಿಂದ ನೀಡಿರುವ ಸುತ್ತೋಲೆಯಂತೆ (ಉಲ್ಲೇಖ-2) ಕ್ರಮವಹಿಸುವುದು.
8. ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಆಗಿಂದ್ದಾಗೆ ಇಲಾಖೆಯಿಂದ ಹೊರಡಿಸುವ ಜ್ಞಾಪನ / ಸುತ್ತೋಲೆಗಳನ್ನು ಅನುಸರಿಸುವುದು.

ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿ ಮೌಲ್ಯಾಂಕನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ಸೂಚಿಸಿದೆ.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ

ಆಯುಕ್ತರು
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

17/7

**ಗೆ,**

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ರವರ ಮೂಲಕ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಅಗತ್ಯ ಕ್ರಮಕ್ಕಾಗಿ.
4. SADPI, SATS ವಿಭಾಗ, ಆಯುಕ್ತರ ಕಛೇರಿ ರವರು ಸದರಿ ಸುತ್ತೋಲೆಯಂತೆ SATS ತಂತ್ರಾಂಶದಲ್ಲಿ ಮಕ್ಕಳ ಶೈಕ್ಷಣಿಕ ಪ್ರಗತಿ ದಾಖಲಿಸಲು ಅನುವಾಗುವಂತೆ ತಂತ್ರಾಂಶ ಅಭಿವೃದ್ಧಿಪಡಿಸಿ ಅನುಪಾಲನೆ ಮಾಡುವುದು.

**ಪ್ರತಿಯನ್ನು ಗೌರವ ಪೂರ್ವಕವಾಗಿ:**

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಅಪರ ಆಯುಕ್ತರು, ಧಾರವಾಡ ಆಯುಕ್ತಾಲಯ ಮತ್ತು ಕಲಬುರಗಿ ಆಯುಕ್ತಾಲಯ, ಶಾಲಾ ಶಿಕ್ಷಣ ಇಲಾಖೆ, ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ರಾಜ್ಯದ ಎಲ್ಲಾ ನಿರ್ದೇಶಕರು, ಶಿಕ್ಷಣ ಇಲಾಖೆ ರವರಿಗೆ ಅನುಪಾಲನೆಗಾಗಿ.
6. ಕಛೇರಿ ಪ್ರತಿ.